4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 74/2023

ಫಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ಪೊಲೀಸ್ ಅಧೀಕ್ಷಕರು,
ಉದಯಗಿರಿ ಪೊಲೀಸ್ ಠಾಣೆ
ಮೈಸೂರು

**ವಿರುದ್ಧ**

ಆರೋಪಿತರು : ವಿಜಯ್ @ ಸೊಪ್ಪು

## ದೋಷಾರೋಪಣೆ

ನಾನು ಶ್ರೀ ಮಲ್ಲನಗೌಡ, 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ ಕೆಳಕಂಡ ಆರೋಪಿಯಾದ :–

2. ಶ್ರೀ ವಿಜಯ್ @ ಸೊಪ್ಪು,
ಬಿನ್ ಪರಶುರಾಮ್,
20 ವರ್ಷ,
ವಾಸ ಃ–
ಮನೆ ನಂ.6,
ಬಸವನಗುಡಿ ಹಿಂಭಾಗ,
ಇಂಡಿಯನ್ ಬೇಕರಿ ಹತ್ತಿರ,
ಕ್ಯಾತಮಾರನಹಳ್ಳಿ,
ಮೈಸೂರು ನಗರ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಮೈಸೂರು ನಗರ, ಉದಯಗಿರಿ ಪೊಲೀಸ್ ಠಾಣಾ ಸರಹದ್ದು, ಕ್ಯಾತಮಾರನಹಳ್ಳಿ, ಎ.ಕೆ.ಕಾಲೋನಿ, ದೊಡ್ಡ ಗರಡಿ ರಸ್ತೆ, ನಂ 115/1 ರಲ್ಲಿ ವಾಸವಾಗಿರುವ 1 ನೇ ಸಾಕ್ಷಿದಾರರಿಗೂ ಹಾಗೂ ಈ ಪ್ರಕಾರಣ 2 ನೇ ಆರೋಪಿತರಾದ ನಿಮಗೂ, ಆರೋಪಿ–1, 3 ರಿಂದ 5 ರವರಿಗೂ ಪರಿಚಯವಿದ್ದು, 2 ನೇ

ಆರೋಪಿತರಾದ ನೀವು ಹಾಗೂ ಉಳಿದ ಆರೋಪಿತರು ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಹಿಂದಿನಿಂದಲೂ ಸಣ್ಣಪುಟ್ಟ ವಿಚಾರಗಳಿಗೆ 1 ನೇ ಸಾಕ್ಷಿದಾರರ ಜೊತೆ ಜಗಳ ಮಾಡುತ್ತಾ ದ್ವೇಷ ಸಾಧಿಸುತ್ತಿದ್ದು, ಅದರಂತೆ ದಿನಾಂಕ 14-11-2018 ರಂದು ರಾತ್ರಿ 10-00 ಗಂಟೆಯ ಸಮಯದಲ್ಲಿ ಕ್ಯಾತಮಾರನಹಳ್ಳಿ ಮುಖ್ಯರಸ್ತೆ, ಹುಲಿಯಮ್ಮ ಬಾರ್ ಮುಂಭಾಗದ ಟಾರ್ ರಸ್ತೆಯಲ್ಲಿ 1 ರಿಂದ 5 ರವರೆಗಿನ ಆರೋಪಿಗಳು ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಎಲ್ಲರೂ ರಸ್ತೆಯಲ್ಲಿ ದೊಂಬಿ ಮಾಡುವ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 ನೇ ಆರೋಪಿತರಾದ ನೀವು ಹಾಗೂ ಉಳಿದ ಆರೋಪಿತರು, ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ, 1 ನೇ ಸಾಕ್ಷಿದಾರರ ವಿರುದ್ಧ ಬಲಪ್ರಯೋಗ ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ 149 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 ನೇ ಆರೋಪಿತರಾದ ನೀವು ಹಾಗೂ ಉಳಿದ ಆರೋಪಿತರು, ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ , ಕೈಯಲ್ಲಿ ದೊಣ್ಣೆ ಮತ್ತು ಕಲ್ಲನ್ನು ಹಿಡಿದುಕೊಂಡು 1 ನೇ ಸಾಕ್ಷಿದಾರರ ವಿರುದ್ಧ ಬಲಪ್ರಯೋಗ ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ 149 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ನಾಲ್ಕ ನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 ನೇ ಆರೋಪಿತರಾದ ನೀವು ಹಾಗೂ ಉಳಿದ ಆರೋಪಿತರು, ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ, ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ 1 ನೇ ಸಾಕ್ಷಿದಾರರಿಗೆ ಡಿಕ್ಕಿ ಹೊಡೆದು, ಮುಂದಕ್ಕೆ ಹೋಗದಂತೆ ತಡೆದಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 149 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 ನೇ ಆರೋಪಿತರಾದ

ನೀವು ಹಾಗೂ ಉಳಿದ ಆರೋಪಿತರು ಮತ್ತು ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕನೊಂದಿಗೆ ಜೋರಾಗಿ ಕಿರುಚಾಡುತ್ತಾ, ಒಬ್ಬರಿಗೊಬ್ಬರು ತಳ್ಳಾಡಿಕೊಂಡು ಬರುತ್ತಿದ್ದು, ಆ ಸಮಯಕ್ಕೆ ಅದೇ ರಸ್ತೆಯಲ್ಲಿ 1 ಮತ್ತು 2 ನೇ ಸಾಕ್ಷಿದಾರರು ನಡೆದುಕೊಂಡು ಬರುತ್ತಿದ್ದಾಗ ಆರೋಪಿಗಳು 1 ನೇ ಸಾಕ್ಷಿದಾರರಿಗೆ ಡಿಕ್ಕಿ ಹೊಡೆದಿದ್ದು, ಆಗ 1 ನೇ ಸಾಕ್ಷಿದಾರರು "ಏಕೆ ಈ ರೀತಿ ರಸ್ತೆಯಲ್ಲಿ ಓಡಾಡುವವರಿಗೆ ತೊಂದರೆ ಕೊಡುತ್ತೀರಿ' ಎಂದು ಕೇಳಿದ್ದಕ್ಕೆ 1 ಮತ್ತು 2 ನೇ ಆರೋಪಿಗಳು " ಏನೋ ಬೋಳಿಮಗನೇ ನೀನು ನಮ್ಮನ್ನೇ ಕೇಳುವಷ್ಟು ಬೆಳೆದಿದ್ದೀಯಾ. ನಿನಗೆ ಒಂದು ಗತಿ ಕಾಣಿಸಬೇಕೆಂದು ಮೊದಲೆ ಅಂಡ್ಕೊಂಡಿದ್ವಿ ಈಗ ಸಿಕ್ಕಿದ್ದೀಯಾ ಸೂಳೆಮಗನೇ, ಇವತ್ತು ನಿನಗೆ ಒಂದು ಗತಿ ಕಾಣಿಸದೆ ಬಿಡುವುದಿಲ್ಲ' ಎಂದು ಅವಾಚ್ಯ ಶಬ್ದಗಳಿಂದ ಬೈಯ್ದಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಆರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 ನೇ ಆರೋಪಿತರಾದ ನೀವು ಉಳಿದ ಆರೋಪಿತರೊಂದಿಗೆ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಸೇರಿ, ಸಾಕ್ಷಿ-1 ರವರಿಗೆ ಬೆದರಿಕೆಯನ್ನು ಹಾಕಿದ್ದಲ್ಲದೇ 1 ಮತ್ತು 2 ನೇ ಆರೋಪಿಗಳು ಅವರ ಜೊತೆ ಇದ್ದವರಿಗೆ 'ಹಿಡ್ಕೊಳ್ರೊ ಇವನ್ನ ಇವತ್ತು ಮುಗ್ಸಿಯೇ ಬಿಡೋಣ, ಇನ್ನೊಬ್ಬನ್ನ ಮುಗ್ಸಿದ್ರೆ ಏರಿಯಾದಲ್ಲಿ ಎಲ್ರುರೂ ನಮ್ಮನ್ನು ನೋಡಿ ಹೆದರಿಕೊಂಡು ನಮ್ಮ ತಂಟೆಗೆ ಬರುವುದಿಲ್ಲ" ಎಂದು ಬೆದರಿಕೆ ಹಾಕಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಏಳನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 4 ಮತ್ತು 5 ನೇ ಆರೋಪಿಗಳು 1 ನೇ ಸಾಕ್ಷಿದಾರರನ್ನು ತಬ್ಬಿ ಹಿಡಿದುಕೊಂಡು, ಅವರ ಕೈಗಳಿಂದ 1 ನೇ ಸಾಕ್ಷಿದಾರರ ಮುಖ, ಬಾಯಿ, ಮೈಕೈಗೆ ಹೊಡೆದು ನೋವುಂಟು ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಎಂಟನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ,1 ನೇ ಆರೋಪಿಯು 1 ನೇ ಸಾಕ್ಷಿದಾರರನ್ನು ಕೊಲೆ ಮಾಡುವ ಉದ್ದೇಶದಿಂದ ಒಂದು ಮರದ ದೊಣ್ಣೆಯಲ್ಲಿ ತಲೆಯ ಹಿಂಭಾಗಕ್ಕೆ 2-3 ಸಾರಿ ಜೋರಾಗಿ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದು, ಆ ಕಾರಣದಿಂದ

ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 307 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 ನೇ ಆರೋಪಿತರಾದ ನೀವು ಒಂದು ಹಿಡಿಗಾತ್ರ ಕಲ್ಲಿನಿಂದ 1 ನೇ ಸಾಕ್ಷಿದಾರರ ತಲೆಗೆ ಹೊಡೆದಿದ್ದಲ್ಲದೇ ಅವರ ಜೊತೆ ಇದ್ದ 3 ನೇ ಆರೋಪಿ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಇಬ್ಬರು 1 ನೇ ಸಾಕ್ಷಿದಾರರನ್ನು ನೆಲದ ಮೇಲೆ ಬೀಳಿಸಿಕೊಂಡು ತಮ್ಮ ಕಾಲುಗಳಿಂದ ತುಳಿದು ನೋವುಂಟು ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಈ ಮೇಲ್ಕಂಡ ಆರೋಪದಡಿ ಆರೋಪಿತರಾದ ನೀವು ನನ್ನಿಂದ ಈ ದಿನ ದಿನಾಂಕ 22.02.2024 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 74/2023

| | | |
|---|---|---|
| ಫಿರ್ಯಾದಿ | : | ಕರ್ನಾಟಕ ರಾಜ್ಯ ಸರ್ಕಾರ<br>ಪೊಲೀಸ್ ಅಧೀಕ್ಷಕರು,<br>ಉದಯಗಿರಿ ಪೊಲೀಸ್ ಠಾಣೆ<br>ಮೈಸೂರು |
| | | **ವಿರುದ್ಧ** |
| ಆರೋಪಿ–2 | : | ವಿಜಯ್ @ ಸೊಪ್ಪು |

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 22.02.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.